# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಸರ್ಕಾರದ ಒಂದು ಉದ್ಯಮ)

ಸಂ.ಐಎಡಿಬಿ/ಕೇಂಕ/ಜನಿ(ನ.ಯೋ/ 1278 /2012-13 ದಿನಾಂಕ: 19.12.2012

:: ಸುತ್ತೋಲೆ ::

ವಿಷಯ: ಮಂಡಳಿ ವತಿಯಿಂದ ಅಭಿವೃದ್ಧಿಪಡಿಸುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿನ ನಿವೇಶನಗಳ ಕಟ್ಟಡ ನಕ್ಷೆ ಅನುಮೋದನೆ, ಕಟ್ಟಡ ಪರವಾನಗಿ, ವಿನ್ಯಾಸ ಅನುಮೋದನೆ ಇತ್ಯಾದಿಗಳ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಶಾಖೆಯ ಮುಖಾಂತರ ಸಲ್ಲಿಸುವ ಬಗ್ಗೆ.

* * * *

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ಅನ್ವಯ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡು ಇದುವರೆಗೂ 136 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ, ನಿವೇಶನಗಳನ್ನು ವಿಂಗಡಿಸಿ, ರಾಜ್ಯಾದ್ಯಂತ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಕೈಗಾರಿಕಾ ಪ್ರದೇಶದಲ್ಲಿ ಬರುವ ಕೈಗಾರಿಕಾ ಕಟ್ಟಡಗಳನ್ನು ಯೋಜಿತ ರೂಪದಲ್ಲಿ ಅಭಿವೃದ್ಧಿಪಡಿಸುವುದು ಅಗತ್ಯವಾಗಿರುತ್ತದೆ. ಈ ಕಾರಣ ನಗರ ಮತ್ತು ಗ್ರಾಮಾಂತರ ಯೋಜನಾ ನಿಯಮಗಳನ್ವಯ 3 ಅಥವಾ 5 ಎಕರೆಗಿಂತ ಮೇಲ್ಪಟ್ಟ ವಿಸ್ತೀರ್ಣವು ಅನುಕ್ರಮವಾಗಿ ವಸತಿ / ವಸತಿಯೇತರ ಅಭಿವೃದ್ಧಿ ಯೋಜನೆಯಡಿ ಅನುಮೋದಿಸಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತದ BDA / BBMP ಯಲ್ಲಿ ಚಾಲ್ತಿಯಲ್ಲಿರುವಂತೆ ಇನ್ನು ಮುಂದೆ ಕಟ್ಟಡ ನಕ್ಷೆ ಅನುಮೋದನೆ, ಕಟ್ಟಡ ಪರವಾನಿಗೆ ಅಭಿವೃದ್ಧಿ ಯೋಜನೆ ಇತ್ಯಾದಿಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಮಂಡಳಿಯ ನಗರ ಮತ್ತು ಗ್ರಾಮಾಂತರ ಯೋಜನಾ ಶಾಖೆಯಲ್ಲಿ ಆಯಾ ಸ್ಥಳೀಯ ಸಂಸ್ಥೆಯ ವಲಯ ನಿಯಮಗಳನ್ವಯ ಪರಿಶೀಲಿಸಿ, ಕಡತಗಳನ್ನು ಮುಖ್ಯ ಅಭಿಯಂತರರು ಹಾಗೂ ಮುಖ್ಯ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರ ಅನುಮೋದನೆಗೆ ಸಲ್ಲಿಸುವುದು ಸೂಕ್ತವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮಂಡಳಿಯ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ, ಕಾರ್ಯ ವೈಖರಿಯ ಬಗ್ಗೆ ಇನ್ನು ಮುಂದೆ ಈ ಕೆಳಕಂಡಂತೆ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ.

### 1. ನಿವೇಶನ ವಿಭಜನೆ : ಸಮಾಮೇಲನ ಪ್ರಕರಣಗಳು

ಮಂಡಳಿಯಿಂದ ಅನುಮೋದನೆಯಾದ ವಿನ್ಯಾಸಗಳಲ್ಲಿನ ಕೈಗಾರಿಕಾ ನಿವೇಶನಗಳು ಹಾಗೂ ಮಂಡಳಿಯಿಂದ ಮಂಜೂರಾದ ನಿವೇಶನಗಳನ್ನು ವಿಭಜನೆ / ಸಮಾಮೇಲನಗೊಳಿಸುವ (ಒಂದುಗೂಡಿಸುವ)

ಪ್ರಕರಣಗಳನ್ನು ಸಂಬಂಧಪಟ್ಟ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಸಂಕ್ಷಿಪ್ತ ವರದಿಯೊಂದಿಗೆ ಮಂಡಳಿಯ ಜಂಟಿ ನಿರ್ದೇಶಕರು, ನಗರ ಯೋಜನೆ ಇವರಿಗೆ ಪರಿಶೀಲನೆಗಾಗಿ ಕಳುಹಿಸಬೇಕಾಗುತ್ತದೆ. ಜಂಟಿ ನಿರ್ದೇಶಕರು ಪರಿಶೀಲಿಸಿದ ನಂತರ ಮುಖ್ಯ ಅಭಿಯಂತರರು ಹಾಗೂ ಮುಖ್ಯ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರವರ ಅನುಮೋದನೆಗೆ ಕಡತಗಳನ್ನು ಸಲ್ಲಿಸುವುದು. ತದನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಕಡತಗಳನ್ನು ಹಿಂದಿರುಗಿಸಿ, ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು, ಕಾರ್ಯಾದೇಶದೊಂದಿಗೆ ನಕ್ಷೆಯನ್ನು ನೀಡಬಹುದಾಗಿದೆ.

**2. ಕಟ್ಟಡ ನಕ್ಷೆಗಳ ಅನುಮೋದನೆ :**

ಮಂಡಳಿಯಲ್ಲಿ ಕೈಗಾರಿಕಾ ನಿವೇಶನಗಳು ಅನುಮೋದನೆಯಾದ ವಿನ್ಯಾಸದಲ್ಲಿ / ಏಕೀಕರಣ ಘಟಕಗಳು ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವ ಪ್ರಕರಣಗಳಲ್ಲಿ ನೆಲ + 3 ಮಹಡಿಗಳವರೆಗಿನ ಕಟ್ಟಡಗಳಿಗೆ ಅನುಮೋದನೆ ನೀಡುವ ಬಗ್ಗೆ ಅಭಿವೃದ್ಧಿ ಅಧಿಕಾರಿಗಳೇ ಪರಿಶೀಲಿಸಿ ಕಟ್ಟಡದ ನಕ್ಷೆಗಳ ಅನುಮೋದನೆಯನ್ನು ನೀಡಬಹುದಾಗಿದೆ. ನೆಲ + 3 ಮಹಡಿಗಳಿಗಿಂತ ಹೆಚ್ಚಿನ ಮಹಡಿಗಳ ಕಟ್ಟಡಗಳ ಕಟ್ಟಡ ನಕ್ಷೆ ಅನುಮೋದನೆ ಪ್ರಕರಣಗಳ ಅರ್ಜಿಗಳನ್ನು ಅಭಿವೃದ್ಧಿ ಅಧಿಕಾರಿಗಳು ಸ್ವೀಕರಿಸಿ ಅಗತ್ಯ ವರದಿಯೊಂದಿಗೆ / ಶಿಫಾರಸ್ಸಿನೊಂದಿಗೆ ಸಲ್ಲಿಸಿ ನಗರ ಯೋಜನೆ ಜಂಟಿ ನಿರ್ದೇಶಕರ ಪ್ರಕರಣಗಳ ಅಭಿಪ್ರಾಯದೊಂದಿಗೆ ಪರಿಶೀಲಿಸಿ. ವಿಲೇವಾರಿಮಾಡಲು ಮುಖ್ಯ ಅಭಿಯಂತರ ಹಾಗೂ ಮುಖ್ಯ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರವರ ಅನುಮೋದನೆಗೆ ಕಡತಗಳನ್ನು ಸಲ್ಲಿಸುವುದು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರವರಿಂದ ಅನುಮೋದನೆಯಾದ ನಂತರ ಎಲ್ಲಾ ಕಟ್ಟಡಗಳ ನಿರ್ಮಾಣ ಪೂರ್ಣಗೊಂಡಿರುವ ಬಗ್ಗೆ ಅಭಿವೃದ್ಧಿ ಅಧಿಕಾರಿಗಳು ಮುಕ್ತಾಯ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ.

**3. ಕೈಗಾರಿಕಾ / ವಸತಿ ವಿನ್ಯಾಸ, ಸಮೂಹ ವಸತಿ ಯೋಜನೆ, ಅಭಿವೃದ್ಧಿ ಯೋಜನೆ :**

ಕೈಗಾರಿಕಾ ವಿನ್ಯಾಸ, ಸಮೂಹ ವಸತಿ ಯೋಜನೆ, ಅಭಿವೃದ್ಧಿ ಯೋಜನೆಗಳಿಗೆ (3 ಎಕರೆಗಿಂತ ಮೇಲ್ಪಟ್ಟ ವಿಸ್ತೀರ್ಣವು ವಸತಿ ಅಭಿವೃದ್ಧಿ ಯೋಜನೆಯಡಿ ಅಥವಾ 5 ಎಕರೆಗಿಂತ ಮೇಲ್ಪಟ್ಟ ವಿಸ್ತೀರ್ಣವು ವಸತಿಯೇತರ ಅಭಿವೃದ್ಧಿ ಯೋಜನೆಯಡಿ) ಸಂಬಂಧಿಸಿದ ನಕ್ಷೆಗಳ ಅನುಮೋದನೆಯನ್ನು ಮಂಡಳಿಯ ನಗರ ಯೋಜನಾ ಜಂಟಿ ನಿರ್ದೇಶಕರ ವಿಭಾಗದಿಂದ ಅರ್ಜಿಯನ್ನು ನೇರವಾಗಿ ಸ್ವೀಕರಿಸಿ, ಪರಿಶೀಲಿಸಿದ ನಂತರ ಮುಖ್ಯ ಅಭಿಯಂತರ ಹಾಗೂ ಮುಖ್ಯ ಅಭಿವೃದ್ಧಿ ಅಧಿಕಾರಿಗಳ ಅನುಮೋದನೆಯೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರವರ ಅನುಮೋದನೆಗೆ ಸಲ್ಲಿಸಬಹುದಾಗಿದೆ.

4. ಮಂಡಳಿಯ ಕೈಗಾರಿಕಾ ವಿನ್ಯಾಸಗಳಲ್ಲಿ ಲಭ್ಯವಾಗುವ ಹೆಚ್ಚುವರಿ ನಿವೇಶನಗಳನ್ನು ಹಾಗೂ ಇತರೆ ಬದಲಾವಣೆಗಳನ್ನು ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ಅಳವಡಿಸುವ ಬಗ್ಗೆ.

ಮಂಡಳಿಯ ಕೈಗಾರಿಕಾ ವಿನ್ಯಾಸಗಳಲ್ಲಿ ಲಭ್ಯವಾಗುವ ಹೆಚ್ಚುವರಿ ನಿವೇಶನಗಳನ್ನು ಇತರ ಬದಲಾವಣೆಗಳನ್ನು ಅನುಮೋದಿತ ವಿನ್ಯಾಸ ನಕ್ಷೆಯಲ್ಲಿ ಅಳವಡಿಲು ಅಭಿವೃದ್ಧಿ ಅಧಿಕಾರಿಗಳ ಕಛೇರಿಯಿಂದ ಪ್ರಸ್ತಾವನೆಗಳನ್ನು ಮಂಡಳಿಯ ನಗರ ಮತ್ತು ಗ್ರಾಮಾಂತರ ಯೋಜನೆಯ ಜಂಟಿ ನಿರ್ದೇಶಕರ ಕಛೇರಿಗೆ ಕಳುಹಿಸಿ ಕೊಡಬೇಕು ನಂತರ ಜಂಟಿ ನಿರ್ದೇಶಕರ ಅಭಿಪ್ರಾಯದೊಂದಿಗೆ ಮುಖ್ಯ ಅಭಿಯಂತರರು ಹಾಗೂ ಮುಖ್ಯ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರವರ ಆದೇಶದ ನಂತರ ಅಗತ್ಯ ಕ್ರಮಕ್ಕಾಗಿ ಸಂಭಂದಪಟ್ಟ ಅಭಿವೃದ್ಧಿ ಅಧಿಕಾರಿಗಳ ಕಛೇರಿಗೆ ಕಡತಗಳನ್ನು ಕಳುಹಿಸಲಾಗುವುದು.

(ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಂಡಳಿಯ ಅಧ್ಯಕ್ಷರು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅನುಮೋದನೆ ಮೇರೆಗೆ.)

ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು.

ಪ್ರತಿಯನ್ನು :

1. ಮುಖ್ಯ ಅಭಿವೃದ್ಧಿ ಅಧಿಕಾರಿ ಹಾಗೂ ಮುಖ್ಯ ಅಭಿಯಂತರರ ಆಪ್ತ ಶಾಖೆ. ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು. ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಹಣಕಾಸು ನಿಯಂತ್ರಣಾಧಿಕಾರಿಗಳು. ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ವಿಶೇಷ ಜಿಲ್ಲಾಧಿಕಾರಿಗಳು. ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಕಾನೂನು ಸಲಹೆಗಾರರು. ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಜಂಟಿ ನಿರ್ದೇಶಕರು (ನ.ಯೋ). ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಜಂಟಿ ನಿರ್ದೇಶಕರು. (ಹಂಚಿಕೆ ವಿಭಾಗ). ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
8. ಕಾರ್ಯದರ್ಶಿಗಳು-1 & 2. ಕೆಐಎಡಿಬಿ. ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಎಲ್ಲಾ ಅಭಿವೃದ್ಧಿ ಅಧಿಕಾರಿಗಳು. ಕೆಐಎಡಿಬಿ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
10. ಕಡತಕ್ಕೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು.